ಮೇಲೆ ಬಿಡಿಸಿದ್ದ ಚಿತ್ರವನ್ನು ಹಿಡಿದಿದ್ದ ಬಾಲಕ ಇವನಿಗೆ ಅರ್ಥವಾಗದ ಭಾಷೆಯಲ್ಲಿ ಏನನ್ನೋ ಕೇಳಿದ ಹಾಗಿತ್ತು. ಅವನೇನು ಕೇಳುತ್ತಿರುವನೆಂದು ಅರಿಯದ ಡಾಕ್ಟರ್ ಪ್ರಶ್ನಾರ್ಥಕವಾಗಿ ಮರಿಯಾಳ ಮುಖ ನೋಡಿದ.

‘ಚಿತ್ರದಲ್ಲಿರುವುದು ಅವನು ಓದುತ್ತಿದ್ದ ಶಾಲೆ, ಅದರ ಪಕ್ಕದಲ್ಲಿರುವವನು ಅವನ ಗೆಳೆಯ. ನೀವು ಅವನನ್ನು ಅಲ್ಲಿಗೆ ಕರೆದೊಯ್ಯುವಿರೇನು ಎಂದು ಕೇಳುತ್ತಿದ್ದಾನೆ. ಆ ಶಾಲೆ ಮತ್ತು ಅವನ ಗೆಳೆಯರಿಬ್ಬರೂ ರಾಕೆಟ್ ದಾಳಿಯಲ್ಲಿ ಭಸ್ಮವಾಗಿದ್ದಾರೆ. ಅವನ ಪುಟ್ಟ ಮನಸಿಗೆ ಅದರ ಅರಿವಿಲ್ಲ. ಬಂದವರಿಗೆಲ್ಲ ಉತ್ತರ ದೊರಕದ ಪ್ರಶ್ನೆಯನ್ನು ಕೇಳಿ ಸುಮ್ಮನಾಗುತ್ತಾನೆ, ದಿನವಿಡೀ ಕೇಳುವ ಈ ಮಕ್ಕಳ ಪ್ರಶ್ನೆಗಳಿಗೆ ನನ್ನಲ್ಲಿ ಉತ್ತರವಿಲ್ಲ ಎಂದು ಅನಿಸುತ್ತದೆ. ತನ್ನ ತಂದೆ ಯಾಕೆ ಬರುತ್ತಿಲ್ಲ? ತಮ್ಮ ಮನೆಗೆ ತಾವೇಕೆ ಹೋಗುತ್ತಿಲ್ಲ? ಬೇರೆ ಭಾಷೆಯನ್ನು ತಾವೇಕೆ ಕಲಿಯಬೇಕು? ಈ ನೌಕೆಯಲ್ಲಿ ನಾವೇಕೆ ನೆಲೆಸಬೇಕು? ಎನ್ನುವ ಈ ಮುಗ್ಧರಿಗೆ ಏನು ಹೇಳಬೇಕೆಂದು ನನಗೆ ತೋಚದು’ ಎಂದು ನಿಟ್ಟುಸಿರುಬಿಟ್ಟಳು ಮರಿಯಾ.

‘ಇಲ್ಲಿರುವವರ ಪ್ರತಿ ಕಣ್ಣುಗಳಲ್ಲೊಂದು ಕಥೆಯಿದೆ. ಪ್ರತಿಯೊಬ್ಬರ ಹೃದಯದಲ್ಲೊಂದು ವ್ಯಥೆಯ ಗೀತೆಯಿದೆ. ಕುಳಿತು ಬರೆದರೆ ಒಂದು ದೊಡ್ಡ ಗ್ರಂಥವೇ ಆಗುತ್ತದೆ’ – ಮುಂದುವರೆಸಿದ ಅವಳ ಮಾತುಗಳನ್ನು ಮೌನವಾಗಿಯೇ ಆಲಿಸುತ್ತಿದ್ದನು ಡಾಕ್ಟರ್. ಅನತಿ ದೂರದಲ್ಲಿ ಸಾರ್ವಜನಿಕ ದೂರವಾಣಿಯ ಮುಂದೆ, ಸಾಲಿನಲ್ಲಿ ನಿಂತಿದ್ದ ವೃದ್ಧರನ್ನು ಕುರಿತು ಮಾತು ಮುಂದುವರೆಸಿದ್ದಳು.

‘ಅಲ್ಲಿ ನಿಂತಿರುವ ಆ ವೃದ್ಧರನ್ನು ನೋಡಿ. ಅವರು ಬಿಟ್ಟು ಬಂದ ಬಂಧುಬಳಗದವರು ಬದುಕುಳಿದಿರುವರೆ? ಹುಟ್ಟಿ ಬೆಳೆದ ಮನೆ ಇನ್ನೂ ಸ್ಥಿರವಾಗಿರುವುದೆ? ಅಟ್ಟಹಾಸ ಬೀರುತ್ತಿರುವ ಯುದ್ಧ ನಿಲ್ಲಬಹುದೆ? ಹುಟ್ಟಿದ ಮಣ್ಣನ್ನು ಮತ್ತೆ ಮೆಟ್ಟಬಹುದೆ? ದಿನವಿಡೀ ಈ ಪ್ರಶ್ನೆಗಳಿಗೆ ಉತ್ತರವಿಲ್ಲದೆ ಪರಿತಪಿಸುತ್ತ, ಬದುಕುಳಿದವರಿಂದ ದೂರವಾಣಿಯಲ್ಲಿ ಬಂದ ಒಂದೆರಡು ಮಾತುಗಳನ್ನು ಕೇಳಿ ಖುಷಿಪಟ್ಟು ನಿದ್ದೆ ಮಾಡುತ್ತಾರೆ. ಅದೇ ಅವರ ಜೀವನ’.

‘ಅಲ್ಲಿ ನೋಡಿ, ಕೆಲವು ತಿಂಗಳಿನ ಮುಂಚೆ ಹುಟ್ಟಿದ, ಹಾಗೆಯೇ ಹುಟ್ಟದೇ ಇನ್ನೂ ಹೊಟ್ಟೆಯಲ್ಲಿ ತೆವಳುತ್ತಿರುವ ಮಕ್ಕಳನ್ನು ನೋಡಲು, ತಮ್ಮ ಗಂಡಂದಿರು ಬರಬಹುದೆಂದು ಹಗಲಿರುಳೂ ಭರವಸೆಯ ಕಣ್ಣುಗಳಿಂದ ಕಾಯುತ್ತಿದ್ದಾರೆ ಆ ಹೆಂಗಳೆಯರು...’

‘ಕ್ಷಮೆ ಇರಲಿ, ಭಾವುಕಳಾಗಿ ಬಡಬಡಿಸಿಬಿಟ್ಟೆ. ತಾಳ್ಮೆಯಿಂದ ಕೇಳುವ ಕಿವಿಗಳ ಮುಂದೆ ದುಃಖವನ್ನು ತೋಡಿಕೊಳ್ಳಬೇಕೆಂದೆನಿಸುತ್ತದೆ. ನಿಮಗೆ ಆ ತಾಳ್ಮೆ ಇದೆ ಎಂದು ನಂಬಿರುವೆ’.

‘ಮರಿಯಾ... ಇದೆಲ್ಲವನ್ನು ನೋಡಿ ಖೇದವೆನಿಸುತ್ತಿದೆ. ಯುದ್ಧವೆಂಬ ಪಿಶಾಚಿ ಎಷ್ಟು ಭೀಕರ ಎಂಬುದರ ಅರಿವಾಗುತ್ತಿದೆ. ನಿನ್ನ ದೇಶದಲ್ಲಿ ನಡೆಯುತ್ತಿರುವ ಯುದ್ಧ ಹಾಳಾಗಿಹೋಗಲಿ. ಆದರೆ, ಏನನ್ನೂ ಅರಿಯದ ಈ ಮಕ್ಕಳು, ಮುಂದೇನೆಂದು ಕಾಯುತ್ತಿರುವ ಹೆಂಗಳೆಯರು ಮತ್ತು ಹಿರಿಯರು ತಮ್ಮ ಜೀವನದಲ್ಲಿ ನಡೆಯುತ್ತಿರುವ ಈ ಯುದ್ಧವನ್ನು ಗೆದ್ದು ಬದುಕು ಕಟ್ಟಿಕೊಳ್ಳುವರೇ ಎನ್ನುವುದು ಯಕ್ಷಪ್ರಶ್ನೆ. ಅದಕ್ಕೆ ಉತ್ತರ ಕೊಡುವವರಾರು?’

‘ಡಾಕ್ಟರ್, ಕೆಲವು ಸಲ ಜೀವನದಲ್ಲಿ ಎಲ್ಲದಕ್ಕೂ ಉತ್ತರವಿರದಿದ್ದರೂ, ಕೊನೆಗೊಂದು ದಿನ ಉತ್ತರವನ್ನು ನಾವೇ ಹುಡುಕಿ ಕಂಡುಕೊಳ್ಳಬೇಕಾಗುತ್ತದೆ’ ಎಂದಳು ಮರಿಯಾ.

‘ನಿಜ. ಇಲ್ಲಿರುವ ಎಲ್ಲರ ಜೀವನದ ಯಕ್ಷಪ್ರಶ್ನೆಗೆ



ಉತ್ತರ ದೊರಕಲಿ ಎನ್ನುವುದು ನನ್ನಾಸೆ ಕೂಡ. ನಿನ್ನನ್ನು ಕಂಡು ಮಾತನಾಡಿದ್ದಕ್ಕೆ ತುಂಬಾ ಸಂತೋಷವೆನಿಸಿತು. ಮುಂದಿನ ವಾರ ಆಸ್ಪತ್ರೆಯಲ್ಲಿ ಕಾಣುವೆ’ ಎಂದು ಹೇಳಿ ಅವಳನ್ನು ಬೀಳ್ಕೊಟ್ಟರು.

ಅಲ್ಲಿರುವ ಪರಿಸ್ಥಿತಿಯನ್ನು ಕಂಡು ಡಾಕ್ಟರರ ಮನಸಿಗೆ ನೋವಾಗಿತ್ತು. ಹಾದಿಯುದ್ದಕ್ಕೂ ಮನಸಿನಲ್ಲಿ ಏನೇನೋ ವಿಚಾರಗಳು ಸುತ್ತುತ್ತಿದ್ದವು. ‘ಈ ಆಧುನಿಕ ಯುಗದಲ್ಲಿ ಈ ಹಾಳಾದ ಯುದ್ಧ ಯಾರಿಗೆ ಬೇಕು? ಹಿಂದಿನ ಯುದ್ಧಗಳಿಂದ ಕಲಿತದ್ದು ಸಾಕಲ್ಲವೆ? ಯುದ್ಧ ಮಾಡುವುದಿದ್ದರೆ ಸೈನಿಕರೊಂದಿಗೆ ಮಾಡಲಿ, ದುರ್ಬಲ ನಾಗರಿಕರ ಮೇಲೆ ಯಾಕೆ ಈ ದೌರ್ಜನ್ಯ? ಯುದ್ಧದಲ್ಲಿ ಗೆದ್ದವನು ಸೋತ, ಸೋತವನು ಸತ್ತ ಎಂಬ ಅರಿವು ಯಾಕೆ ಅವರಿಗಿಲ್ಲ?’ ಉತ್ತರವಿಲ್ಲದ ಪ್ರಶ್ನೆಗಳನ್ನು ತಿರುವಿ ಹಾಕುತ್ತ, ಅಸಹಾಯಕನಾಗಿ ಮನೆಯ ಅಂಗಳವನ್ನು ತಲುಪಿದ್ದರು ಡಾಕ್ಟರ್.

ಕಾಲ ಕಳೆದಂತೆ ಮರಿಯಾಳ ಮನಸಿನಲ್ಲಿ ತಾಯ್ತನದ ಚಿಗುರು ಸುಪ್ತವಾಗಿ ಬೆಳೆಯತೊಡಗಿತ್ತು. ಮಾನಸಿಕವಾಗಿ ಮತ್ತು ಶಾರೀರಿಕವಾಗಿ ಬದಲಾವಣೆಗಳಾಗತೊಡಗಿದ್ದವು. ತನಗರಿವಿಲ್ಲದೆ ಹೊಟ್ಟೆಯಲ್ಲಿದ್ದ ಮಗು ಇನ್ನಷ್ಟು ಓಡಾಡಲಿ ಎಂದು ಕೆಲವೊಮ್ಮೆ ಮನಸು ಬಯಸಿದರೆ, ಪಕ್ಕದ ಕೋಣೆಯಲ್ಲಿಂದ ಮಗು ಅರಚುತ್ತಿದ್ದರೆ ತನ್ನ ಹೊಟ್ಟೆಯಲ್ಲಿರುವ ಕೂಸೇ ಕಿರುಚುತ್ತಿದೆ ಎಂದು ಭಾಸವಾಗುತ್ತಿತ್ತು. ಅಮ್ಮಾ ಎಂದು ತಾಯಿಯನ್ನು ಕೂಗುತ್ತಿದ್ದ ಮಕ್ಕಳನ್ನು ಕಂಡು ಆ ಧ್ವನಿ ತನ್ನ ಒಡಲಿನಿಂದಲೇ ಪ್ರತಿಧ್ವನಿಯಾಗುತ್ತಿದೆ ಏನೋ ಎಂಬ ಭಾವನೆ ಬರತೊಡಗಿತ್ತು. ಅವಳ ಮನಸಿನಲ್ಲಿ ನೂರಾರು ಪ್ರಶ್ನೆಗಳು ಮೂಡಿ ಮಾಯವಾಗತೊಡಗಿದ್ದವು. ಆ ದುಷ್ಟ ಸೈನಿಕನು ಮಾಡಿದ್ದು ಮಹಾ ತಪ್ಪು. ಆದರೆ ತನ್ನ ಹೊಟ್ಟೆಯಲ್ಲಿರುವ, ಏನನ್ನೂ ಅರಿಯದ ಮಗುವಿನದು ಯಾವ ತಪ್ಪು? ಮಗುವಿನ ದೇಹದಲ್ಲಿ ಹರಿಯುತ್ತಿರುವುದು ನನ್ನ ರಕ್ತ ತಾನೇ? ನನ್ನ ದೇಹದ ಕುಡಿಯನ್ನು ಅನಾಥ ಪಟ್ಟದೊಂದಿಗೆ ಬಿಸಾಕುವುದು ಎಷ್ಟು ನ್ಯಾಯ? ಬದುಕಲು ಬಂದವಳಿಗೆ, ಹುಟ್ಟುವ ಮಗುವಿನ ಬದುಕು ಕಟ್ಟಲು ಸಾಧ್ಯವಿಲ್ಲವೇ? ಸಮಾಜದಲ್ಲಿ ಸೆಟೆದು ನಿಲ್ಲಬೇಕೆಂದು ನಿರ್ಧರಿಸಿದವಳಿಗೆ ಈ ಮಗುವಿನ ಪೋಷಣೆ ಭಾರವೇ? ತನ್ನ ದೇಶದಲ್ಲಿ ಆದ ಆಘಾತದಿಂದ, ಹೊಸ ಪರಿಸರದಲ್ಲಿ, ಅವಳ ಮನಸು ನಿಧಾನವಾಗಿ ವಾಸ್ತವಕ್ಕೆ ಮರುಳತೊಡಗಿತ್ತು. ಮೊದಲೇ ನಿಗದಿಪಡಿಸಿದಂತೆ, ಅಲ್ಟ್ರಾಸೌಂಡ್ ಪರೀಕ್ಷೆಯ ನಂತರ, ಡಾಕ್ಟರ್ ಜಾಧವರ ಪರೀಕ್ಷಾ ಕೋಣೆಯನ್ನು ಮರಿಯಾ ತಲುಪಿದಾಗ ಬೆಳಗಿನ ಹನ್ನೊಂದು ಗಂಟೆ. ಹಸನ್ಮುಖದಿಂದ ಬರಮಾಡಿಕೊಂಡ ಡಾಕ್ಟರ್, ‘ಮೂವತ್ತಾರು ವಾರ ತುಂಬಿದೆ, ಹೆರಿಗೆಯ ದಿನವನ್ನು ಗೊತ್ತುಪಡಿಸುವುದು ಒಳ್ಳೆಯದು’ ಎಂದರು.

‘ಡಾಕ್ಟರ್, ನಿಮಗೆ ಗೊತ್ತಿರುವ ಹಾಗೆ ನೈಜ ಹೆರಿಗೆಯು ನನ್ನಿಂದ ಸಾಧ್ಯವಿಲ್ಲ. ದಯವಿಟ್ಟು ಸಿಜೇರಿಯನ್ ಹೆರಿಗೆಯನ್ನು ಗೊತ್ತುಪಡಿಸಿ’ ಎಂದು ಕೇಳಿಕೊಂಡಳು ಮರಿಯಾ.

ಕೊನೆಗೂ ಆ ದಿನ ಬಂದೇಬಿಟ್ಟಿತು. ಆಪರೇಷನ್ ಥಿಯೇಟರ್‌ನಲ್ಲಿ ಸಿಸ್ಟರ್ ಲೂಸಿ, ಡಾಕ್ಟರ್ ಜಾಧವ, ಅರಿವಳಿಕೆ ತಜ್ಞ, ಮಗುವನ್ನು ಎತ್ತಿಕೊಳ್ಳಲು ನೇಮಿಸಿದ್ದ ನರ್ಸ್ ಎಲ್ಲರೂ ಅವಳನ್ನು ಆದರದಿಂದ ಬರಮಾಡಿಕೊಂಡರು. ತನ್ನ ದೇಶದಲ್ಲಿ ರಕ್ತದ ಓಕುಳಿಯನ್ನು ಕಂಡಿದ್ದ ಅವಳಿಗೆ ಇಲ್ಲಿ ಮಾನವೀತೆಯ ಮಹಾಪೂರವೇ ಹರಿದುಬರುತ್ತಿದೆ ಅನಿಸತೊಡಗಿತು.

ಹುಟ್ಟಿದ ಮಗು ಚೀರಲು ಪ್ರಾರಂಭಿಸಿದಾಗ, ಆ ಚೀರಿನಲ್ಲಿದ್ದ ‘ಅಮ್ಮಾ’ ಎಂಬ ಒಳಧ್ವನಿ ಅವಳ ಕಣ್ಣುಗಳನ್ನು ತೇವಗೊಳಿಸಿತು. ಅವಳಿಗೆ ಅರಿವಿಲ್ಲದಂತೆಯೇ ಅವಳ ಕೈಗಳು ಮಗುವನ್ನು ಅಪ್ಪಿಕೊಳ್ಳಲು ನರ್ಸಿನ ಕಡೆಗೆ ಚಾಚಿದ್ದವು.

ನರ್ಸ್ ಮಗುವನ್ನು ಅವಳ ಎದೆಯ ಮೇಲೆ ಹಾಕಿದಾಗ, ಅದರ ಚಿಕ್ಕ ಬಾಯಿ ತಾಯಿಯ ಮೊಲೆಯನ್ನು ತಟ್ಟಿ, ತೊಟ್ಟು ಹಾಲಿಗಾಗಿ ಕಾಯತೊಡಗಿತ್ತು. ಮರಿಯಾ ಮಗುವನ್ನು ಗಟ್ಟಿಯಾಗಿ ತಬ್ಬಿಕೊಂಡು ‘ನನ್ನ ಮಗು... ನನ್ನ ಮಗು... ಯಾರಿಗೂ ಕೊಡಲಾರೆ... ಅನಾಥವಾಗಲು ಬಿಡಲಾರೆ...’ ಎಂದು ಅರಚತೊಡಗಿದಳು.

ಆಪರೇಷನ್ ಮುಗಿಸಿದ ಡಾಕ್ಟರ್ ಜಾಧವ ಸಂತಸದಿಂದ ಉದ್ಗರಿಸಿದರು: ‘ಮರಿಯಾ ನೀನು ಗೆದ್ದೆ, ನಿನ್ನ ಯುದ್ಧದಲ್ಲಿ ಗೆದ್ದೆ’.

**ಪ್ರತಿಕ್ರಿಯಿಸಿ: feedback@sudha.co.in**

